'ಲಿಂಗಾಯತ ಮಠಾಧಿಪತಿಗಳ ಒಕ್ಕೂಟ'

ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿ

# ಬಸವ ಸಂಸ್ಕೃತಿ ಅಭಿಯಾನ

2025 ಸೆಪ್ಟೆಂಬರ್ 1 ರಿಂದ ಅಕ್ಟೋಬರ್ 1 ರವರೆಗೆ

ಲಿಂಗವಿದ್ದಲ್ಲಿ ನಿಂದೆಯಿರದು, ನಿಂದೆಯಿದ್ದಲ್ಲಿ ಲಿಂಗವಿರದು.
ಅವರೆಂತಿದ್ದಡೇನು ಹೇಗಿದ್ದಡೇನು ಲಿಂಗವಂತರವರು.
ಉಪಮಿಸಬಾರದ ಮಹಾಘನವು ಕೂಡಲಸಂಗನ ಶರಣರು.
- ಬಸವಣ್ಣ

ಬಸವ ಗುರುವಿನ ಹೆಸರು ಬಲ್ಲಾತರಾರಿಲ್ಲ, ಹುಸಿಮಾತನಾಡಿ
ಕೆಡಬೇಡ । ಲಿಂಗಾಯತಕೆ ಬಸವನೇ ಕರ್ತೃ ಸರ್ವಜ್ಞ

## ಸಾಂಸ್ಕೃತಿಕ ನಾಯಕ:

ಕರ್ನಾಟಕ ಸರ್ಕಾರ 'ಸಾಂಸ್ಕೃತಿಕ ನಾಯಕ ಬಸವಣ್ಣ' ಎಂದು ಘೋಷಣೆ ಮಾಡಿ ಒಂದು ವರ್ಷವಾಗಿದೆ. ಇದೊಂದು ಐತಿಹಾಸಿಕ ಘಟನೆ. ಬಸವಣ್ಣನವರು ಕರ್ನಾಟಕ ಮಾತ್ರವಲ್ಲ; 'ವಿಶ್ವದ ಸಾಂಸ್ಕೃತಿಕ ನಾಯಕ'. ಕಾರಣ ಅವರು ರಾಜಕೀಯ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ನೈತಿಕ, ಸಾಂಸ್ಕೃತಿಕ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಪರಿವರ್ತನೆ ತಂದವರು. ಜಾತಿ, ಮತ, ಲಿಂಗ, ಬಡವ-ಬಲ್ಲಿದ ಎನ್ನುವ ಭೇದವಿಲ್ಲದ ಸಮಸಮಾಜವನ್ನು ನೆಲೆಗೊಳಿಸಿದವರು. ನೆಲ, ಜಲ ಒಂದೇ ಆಗಿರುವಾಗ ತನ್ನನ್ನು ತಾನು ಅರಿತರೆ ಕುಲ ಒಂದೇ ಎಂದು ಸಾರಿದವರು. ಅಂಥ ವಾತಾವರಣವನ್ನು ಬಸವಕಲ್ಯಾಣದಲ್ಲಿ ಅನುಭವ ಮಂಟಪದ ಮೂಲಕ ಜಾರಿಯಲ್ಲಿ ತಂದವರು.

ಬಸವಣ್ಣನವರು 'ಬಾಗಿದ ತಲೆ ಮುಗಿದ ಕೈಯಾಗಿರಿಸು' ಎಂದು ದೇವರಲ್ಲಿ ಪ್ರಾರ್ಥಿಸಿಕೊಂಡದ್ದಷ್ಟೇ ಅಲ್ಲ; ಅದರಂತೆ ಬಾಳಿದವರು. 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದು ತಮ್ಮ ಭೃತ್ಯಾಚಾರ ತತ್ವವನ್ನು ಎತ್ತಿ ಹಿಡಿದವರು. 'ಪರಧನ, ಪರಸ್ತ್ರೀಯ ಜೂಜಿಂಗಂಜುವೆ', 'ಒಡೆಯರು ಬಂದಡೆ ಗುಡಿತೋರಣವ ಕಟ್ಟಿ; ನಂಟರು ಬಂದಡೆ ಸಮಯವಿಲ್ಲೆನ್ನಿ' ಎನ್ನುವ ಮೂಲಕ ಒಬ್ಬ ಪ್ರಜಾಪ್ರತಿನಿಧಿ ಹೇಗೆ ಬಾಳಬೇಕೆಂದು ತೋರಿಸಿಕೊಟ್ಟವರು. 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂದು ಬಾಹ್ಯ ದೇವಾಲಯಗಳನ್ನು ನಿರಾಕರಿಸಿ ದೇಹವೇ ದೇವಾಲಯವಾಗಬೇಕೆಂಬ ಸದುದ್ದೇಶದಿಂದ ಇಷ್ಟಲಿಂಗ ಪೂಜೆಯನ್ನು ಜಾರಿಗೆ ತಂದವರು. ತನ್ಮೂಲಕ 'ಇಷ್ಟಲಿಂಗ ಜನಕ'ರಾದವರು. ಅಂಥವರನ್ನು ಸಾಂಸ್ಕೃತಿಕ ನಾಯಕರೆನ್ನದೆ ಇನ್ನಾರನ್ನು ಸಾಂಸ್ಕೃತಿಕ ನಾಯಕರೆನ್ನಲು ಸಾಧ್ಯ?

## ವಚನ ಸಂವಿಧಾನ:

ಡಾ. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ರಚಿತವಾದ ಭಾರತದ ಸಂವಿಧಾನ ಪ್ರತಿಪಾದಿಸುವ ಆಶಯಗಳೆಲ್ಲವೂ ಬಸವಾದಿ ಶರಣರ 'ವಚನ ಸಂವಿಧಾನ'ದಲ್ಲಿ ಅಡಕವಾಗಿವೆ. ಮುಂದುವರಿದು ಹೇಳುವುದಾದರೆ 'ವಚನ ಸಂವಿಧಾನ'ದಲ್ಲಿರುವ ವಿಶ್ವಮಾನ್ಯ ತತ್ವಾದರ್ಶಗಳೆಲ್ಲವೂ ಭಾರತ ಸಂವಿಧಾನದಲ್ಲಿ ಇಲ್ಲ. ಭಾರತ ಸಂವಿಧಾನ ರಚನೆಯಾಗುವ 900 ವರ್ಷಗಳ ಹಿಂದೆಯೇ 'ವಚನ ಸಂವಿಧಾನ' ಅನುಭವ ಮಂಟಪ ಎನ್ನುವ ಸಂಸತ್ ಮೂಲಕ ಜಾರಿಯಲ್ಲಿ ಬಂದಿತ್ತು ಎಂಬುದೇ ಅದ್ಭುತ. ಅದು 'ಸಕಲ ಜೀವಾತ್ಮರ ಲೇಸನ್ನು' ಬಯಸಿದ್ದು. ಶೂದ್ರರನ್ನು ಮತ್ತು ಮಹಿಳೆಯರನ್ನು ಶೋಷಣೆ ಮಾಡಿಯೇ ಬದುಕುತ್ತಿದ್ದ ಮೇಲ್ವರ್ಣದ ಸ್ವಾರ್ಥಸಾಧಕರಿಗೆ, ವೈದಿಕ ಪರಂಪರೆಯವರಿಗೆ 'ವಚನ ಸಂವಿಧಾನ' ವೈರಿಯಂತೆ ಕಂಡದ್ದರಲ್ಲಿ ಆಶ್ಚರ್ಯವೇನಿಲ್ಲ. ವಚನಕಾರರು ವೇದ, ಶಾಸ್ತ್ರ, ಪುರಾಣ, ಆಗಮ ಇತ್ಯಾದಿಗಳನ್ನು ನಂಬದೆ ಶರಣರ ಪುರಾತನ ಸಂಸ್ಕೃತಿಯನ್ನು ನಂಬಿ ಬದುಕನ್ನು ಕಟ್ಟಿಕೊಂಡವರು. ಇದರಿಂದಾಗಿಯೇ ಆಗ ರಕ್ತಕ್ರಾಂತಿಯಾಯ್ತು. ಇಂದು ಸಹ ಅಂದಿನ ಪರಿಸ್ಥಿತಿ ಪೂರ್ಣ ಬದಲಾಗಿದೆ ಎಂದು ಹೇಳಲಾಗದು. ಬಸವ ನಾಡಿನಲ್ಲೇ ಪ್ರಜಾಪ್ರತಿನಿಧಿಗಳ ಅಟ್ಟಹಾಸ, ಅಧಿಕಾರಿಗಳ ಬೇಜವಾಬ್ದಾರಿ ಮಿತಿಮೀರಿದೆ. ಇವತ್ತು ಧರ್ಮ ರಾಜಕೀಯದ ದಾಳವಾಗಿ ದುರುಪಯೋಗವಾಗುತ್ತಿದೆ. 'ದಯವಿಲ್ಲದ ಧರ್ಮ ಅದೇವುದಯ್ಯಾ' ಎನ್ನುವ ಬಸವ ವಾಣಿಗೆ ಧಕ್ಕೆ ಬರುತ್ತಿದೆ. ಈ ನಿಟ್ಟಿನಲ್ಲಿ 'ಸಾಂಸ್ಕೃತಿಕ ನಾಯಕ ಬಸವಣ್ಣ'ನವರ 'ವಚನ ಸಂವಿಧಾನ'ದ ಆದರ್ಶಗಳನ್ನು ಎಲ್ಲರ ಮನಕ್ಕೆ ಮುಟ್ಟಿಸುವ ಅಗತ್ಯವಿದೆ.

ಎತ್ತೆತ್ತ ನೋಡಿದಡೆ ಅತ್ತತ್ತ ಬಸವನೆಂಬ ಬಳ್ಳಿ । ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲು । ಒತ್ತಿ ಹಿಂಡಿದಡೆ ಭಕ್ತಿಯೆಂಬ ರಸವಯ್ಯಾ । ಆಯತ ಬಸವಣ್ಣನಿಂದ, ಸ್ವಾಯತ ಬಸವಣ್ಣನಿಂದ, ಸನ್ನಿಹಿತವು ಬಸವಣ್ಣನಿಂದ । ಗುರು ಬಸವಣ್ಣನಿಂದ, ಲಿಂಗ ಬಸವಣ್ಣನಿಂದ, ಜಂಗಮ ಬಸವಣ್ಣನಿಂದ । ಪಾದೋದಕ ಬಸವಣ್ಣನಿಂದ, ಪ್ರಸಾದ ಬಸವಣ್ಣನಿಂದ । ಅತ್ತ ಬಲ್ಲಡೆ ನೀವು ಕೇಳಿರೆ, ಇತ್ತ ಬಲ್ಲಡೆ ನೀವು ಕೇಳಿರೆ । ಬಸವಾ ಬಸವಾ ಬಸವಾ ಎಂದು ಮಜ್ಜನಕ್ಕೆರೆಯದವನ ಭಕ್ತಿ । ಶೂನ್ಯ ಕಾಣಾ, ಕಲಿದೇವರದೇವಾ.

- ಮಡಿವಾಳ ಮಾಚಿದೇವ

## ಬಸವ ಸಂಸ್ಕೃತಿ ಅಭಿಯಾನ:

ಬಸವ ಪಥದ ಮಾರ್ಗದಲ್ಲಿ ನಡೆದು ಅವರ ಸತ್ಯ, ನೀತಿ, ಪ್ರಾಮಾಣಿಕತೆ, ದಯೆ, ಕಾಯಕ ಶ್ರದ್ಧೆ, ದಾಸೋಹ ಪ್ರಜ್ಞೆ, ಏಕದೇವ ನಿಷ್ಠೆ ಇತ್ಯಾದಿ ಆದರ್ಶಗಳಂತೆ ನಡೆಯಬೇಕಾದದ್ದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ. ಇಂದು ಅರಿವನ್ನೇ ಗುರುವನ್ನಾಗಿ, ಆಚಾರವನ್ನೇ ಲಿಂಗವನ್ನಾಗಿ, ನುಡಿಯನ್ನು ಜ್ಯೋತಿರ್ಲಿಂಗವಾಗಿ ಮಾಡಿಕೊಂಡು ದಯೆಯ ತಳಹದಿಯ ಮೇಲೆ ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ. ಇದಕ್ಕಾಗಿ ಬಸವತತ್ವವನ್ನು ಪ್ರತಿಯೊಬ್ಬರ ಮನ, ಬುದ್ಧಿ, ಭಾವದಲ್ಲಿ ಬಿತ್ತಬೇಕಾಗಿದೆ. ಈ ನೆಲೆಯಲ್ಲಿ 'ಲಿಂಗಾಯತ ಮಠಾಧಿಪತಿಗಳ ಒಕ್ಕೂಟ'ದ ಚಿಂತನೆಯ ಫಲಶೃತಿಯೇ 'ಬಸವ ಸಂಸ್ಕೃತಿ ಅಭಿಯಾನ'. ಇದು ಶುದ್ಧ ಬಸವತತ್ವವನ್ನು ಪ್ರಚಾರ, ಪ್ರಸಾರ, ಅನುಷ್ಠಾನದ ಆಶಯ ಹೊಂದಿದೆ. ಜನರಲ್ಲಿ ವೈದಿಕ ಪರಂಪರೆಯ ಬೇರುಗಳು ಆಳವಾಗಿವೆ. ಅವು ಹೊಸದೇನನ್ನೂ ಸ್ವೀಕರಿಸಲು ಬಿಡುತ್ತಿಲ್ಲ. ಅವುಗಳನ್ನು ಕಿತ್ತೆಸೆದು ಬಸವ ಚಿಂತನೆಯ ಸಸಿಗಳನ್ನು ನೆಟ್ಟು ಬೆಳೆಸಿ ಅವುಗಳಿಂದ ಸೂಕ್ತ ಫಲವನ್ನು ಪಡೆಯುವ ಇಚ್ಛಾಶಕ್ತಿಯನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕಿದೆ. ಎಲ್ಲ ಮಠಾಧೀಶರು, ಪ್ರಗತಿಪರರು, ಸಾರ್ವಜನಿಕರು, ಜನಪ್ರತಿನಿಧಿಗಳು, ಬಸವಪರ ಸಂಘಟನೆಗಳು, ಸ್ತ್ರೀ–ಪುರುಷರು ಭಾಗವಹಿಸಿ ಕಾರ್ಯಕ್ರಮದ ಯಶಸ್ವಿಗೆ ತನು, ಮನ, ಧನದಿಂದ ಸೇವೆ ಸಲ್ಲಿಸುತ್ತ ಬಸವಪಥದಲ್ಲಿ ನಡೆಯುವುದಲ್ಲದೆ ಇತರರನ್ನೂ ಕರೆದೊಯ್ಯುವ ಸತ್ಕಾರ್ಯವನ್ನು ಮಾಡಬೇಕಿದೆ.

## ಲಿಂಗಾಯತ ಮಠಗಳ ಒಕ್ಕೂಟ:

ವಿಶ್ವಗುರು ಬಸವಣ್ಣನವರು ಸರ್ವಸಮಾನತೆ, ಕಾಯಕ–ದಾಸೋಹ, ಇಷ್ಟಲಿಂಗಪೂಜೆ ಇಂಥ ಸರ್ವಮಾನ್ಯ ತತ್ವಗಳ ಅಡಿಯಲ್ಲಿ 'ಲಿಂಗಾಯತ' ಧರ್ಮವನ್ನು ಸಂಸ್ಥಾಪಿಸಿದರು. ಅವರ ವಿಶ್ವಮಾನ್ಯ ತತ್ವಗಳನ್ನು ಜನಮನಕ್ಕೆ ಮುಟ್ಟಿಸುವ ಮತ್ತು ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಸ್ಥಾನ–ಮಾನ ಪಡೆಯುವ ಉದ್ದೇಶದಿಂದ ಬಸವನಿಷ್ಠರಾದ ಮತ್ತು ಲಿಂಗಾಯತ ಧರ್ಮಪರ ಮಠಾಧಿಪತಿಗಳ ಈ ಒಕ್ಕೂಟ ರೂಪುಗೊಂಡಿದೆ. ಬಸವಾದಿ ಶರಣರ ತತ್ವಗಳನ್ನು ಎಲ್ಲೆಡೆ ಪ್ರಸಾರ ಮಾಡುವುದು ಇದರ ಉದ್ದೇಶಗಳಲ್ಲಿ ಒಂದು. ಗ್ರಾಮ, ಪಟ್ಟಣಗಳ ಜನರನ್ನು ಸಂಘಟಿಸುವುದು, ಧಾರ್ಮಿಕ ಸಭೆಗಳನ್ನು ಏರ್ಪಡಿಸಿ ಬಸವಾದಿ ಶರಣರು ಬೋಧಿಸಿದ ಧಾರ್ಮಿಕ ವಿಚಾರಗಳನ್ನು ಆಚರಣೆಯಲ್ಲಿ ತರುವುದು ಇದರ ಉದ್ದೇಶ. ಈ ನೆಲೆಯಲ್ಲೇ ಈಗ 'ಬಸವ ಸಂಸ್ಕೃತಿ ಅಭಿಯಾನ'ಕ್ಕೆ ಒಕ್ಕೂಟ ಮುಂದಾಗಿದೆ. ಬಸವಪರ ಒಲವುಳ್ಳ ಯಾರು ಬೇಕಾದರೂ ಈ ಸಂಘಟನೆಯ ಭಾಗವಾಗಿ ದಾಸೋಹಂಭಾವದಿಂದ ದುಡಿಯಲು ಅವಕಾಶವಿದೆ.

## ಅಭಿಯಾನದಲ್ಲಿ ಏನೇನಿರುತ್ತದೆ?

ಅಭಿಯಾನದಲ್ಲಿ ಬಸವಾದಿ ಶರಣರ ಭಿತ್ತಿಚಿತ್ರಗಳಿರುವ 'ಬಸವ' ರಥದ ಮೆರವಣಿಗೆ, ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳ ಜೊತೆ ಸಂವಾದ, ಪಾದಯಾತ್ರೆ, ಬಹಿರಂಗ ಸಭೆ, ವಚನ ಸಂಗೀತ, ಉಪನ್ಯಾಸ, ನಾಟಕ ಪ್ರದರ್ಶನ ಇತ್ಯಾದಿ ಚಟುವಟಿಕೆಗಳಿರುತ್ತವೆ. ಏನೇ ಚಟುವಟಿಕೆಗಳನ್ನು ಮಾಡಿದರೂ ಅವು ಬಸವತತ್ವಕ್ಕೆ ಪೂರಕವಾಗಿರುತ್ತವೆ. ಈ ಅಭಿಯಾನ ಬಸವಣ್ಣನವರ ಜನ್ಮಸ್ಥಳವಾದ ಬಸವನಬಾಗೇವಾಡಿಯಿಂದ ಪ್ರಾರಂಭವಾಗಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕಾರ್ಯಕ್ರಮ ಮಾಡುತ್ತ ರಾಜಧಾನಿ ಬೆಂಗಳೂರಲ್ಲಿ ಕೊನೆಗೊಳ್ಳುವುದು. ಜಾಗತಿಕ ಲಿಂಗಾಯತ ಮಹಾಸಭಾ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ರಾಷ್ಟ್ರೀಯ ಬಸವದಳ, ಬಸವ ಸಮಿತಿ, ಬಸವ ಕೇಂದ್ರ, ಕದಳಿ ಮಹಿಳಾ ವೇದಿಕೆ, ಬಸವಪರ ಸಂಘಟನೆಗಳು, ಬಸವತತ್ವಪ್ರೇಮಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಪ್ರಗತಿಪರರು, ಸಾರ್ವಜನಿಕರು ಇದರಲ್ಲಿ ಭಾಗವಹಿಸುವರು.

**ನಡೆಯಲರಿಯದೆ, ನುಡಿಯಲರಿಯದೆ**
**ಲಿಂಗವ ಪೂಜಿಸಿ ಫಲವೇನು? ಫಲವೇನು?**
**ಅವರ ದುಃಖವೆನ್ನ ದುಃಖ, ಅವರ ಸುಖವೆನ್ನ ಸುಖ.**
**ಕೂಡಲಸಂಗನ ಶರಣರ ಮನನೊಂದಡೆ**
**ಆನು ಬೆಂದೆನಯ್ಯಾ.**

- ಬೆಳಗ್ಗೆ 11 ಗಂಟೆಗೆ ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರ ಜೊತೆ ವಚನ ಸಂವಾದ.
- ಸಂಜೆ 5 ಗಂಟೆಯಿಂದ 6 ಗಂಟೆಯವರೆಗೆ ನಗರದ ಪ್ರಮುಖ ಬೀದಿಯಲ್ಲಿ ಪಾದಯಾತ್ರೆ,
- ಸಂಜೆ 6 ಗಂಟೆಗೆ ಸಾರ್ವಜನಿಕ ಸಮಾರಂಭ.
- ವಚನ ಸಂಗೀತ: 20 ನಿಮಿಷ.
- ಒಬ್ಬರು ಸ್ವಾಮಿಗಳು ಮತ್ತು ಒಬ್ಬರು ಉಪನ್ಯಾಸಕರ ನುಡಿಗಳು ತಲಾ 25 ನಿಮಿಷ.
- ಅತಿಥಿಗಳಿಗೆ ಹೂವಿನ ಹಾರದ ಬದಲು ಪುಸ್ತಕ, ಟವೆಲ್, ವಿಭೂತಿಗಟ್ಟಿ, ಹಣ್ಣುಗಳನ್ನು ಕೊಡಲಾಗುವುದು.
- ರಾತ್ರಿ 8–30ಕ್ಕೆ ನಾಟಕ ಪ್ರದರ್ಶನ.
- ನಾಟಕ ಮುಗಿಯುತ್ತಲೇ ಬಂದವರಿಗೆಲ್ಲ ಪ್ರಸಾದದ ವ್ಯವಸ್ಥೆ.

**ವಚನಗೀತೆ:** ಶಿವಸಂಚಾರ ಸಾಣೇಹಳ್ಳಿ
**ನಾಟಕ:** ಜಂಗಮದೆಡೆಗೆ
**ರಚನೆ:** ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು
**ಸಂಗೀತ–ನಿರ್ದೇಶನ:** ಜಗದೀಶ್ ಆರ್
**ಅಭಿನಯ:** ಶಿವಸಂಚಾರ, ಸಾಣೇಹಳ್ಳಿ

## 'ಲಿಂಗಾಯತ ಮಠಾಧಿಪತಿಗಳ ಒಕ್ಕೂಟ'

ಬಸವ ಸಂಸ್ಕೃತಿ ಅಭಿಯಾನ 2025

**ಪೋಷಕರು:** ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು–ಸಾಣೇಹಳ್ಳಿ, ಶ್ರೀ ಜಗದ್ಗುರು ಡಾ. ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು–ಶಿವಮೊಗ್ಗ

**ಅಧ್ಯಕ್ಷರು:** ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು, ಭಾಲ್ಕಿ

**ಹಿರಿಯ ಉಪಾಧ್ಯಕ್ಷರು:** ಶ್ರೀ ಚಿದಾನಂದ ಮಹಾಸ್ವಾಮಿಗಳು, ಮೈಸೂರು

**ಉಪಾಧ್ಯಕ್ಷರು:** ಶ್ರೀ ಬಸವ ಜಯಮೃತ್ಯುಂಜಯ ಮಹಾಸ್ವಾಮಿಗಳು–ಕೂಡಲಸಂಗಮ, ಶ್ರೀ ಇಮ್ಮಡಿ ಸಿದ್ಧರಾಮ ಸ್ವಾಮಿಗಳು–ಚಿತ್ರದುರ್ಗ, ಶ್ರೀ ಜಗದ್ಗುರು ಅನ್ನದಾನ ಭಾರತಿ ಮಹಾಸ್ವಾಮಿಗಳು–ತಂಗಡಗಿ, ಶ್ರೀ ಜಗದ್ಗುರು ಬಸವ ಮಾಚಿದೇವ ಮಹಾಸ್ವಾಮಿಗಳು–ಚಿತ್ರದುರ್ಗ, ಶ್ರೀ ಬಸವೇಶ್ವರಿ ತಾಯಿಯವರು–ಅತ್ತಿವೇರಿ

**ಕಾರ್ಯದರ್ಶಿ:** ಶ್ರೀ ಶಿವಾನಂದ ಮಹಾಸ್ವಾಮಿಗಳು, ಹಂದಿಗುಂದ

**ಉಪಕಾರ್ಯದರ್ಶಿ:** ಡಾ. ಶ್ರೀಕಂಠ ಮಹಾಸ್ವಾಮಿಗಳು, ಮುಡಿಗುಂಡ

**ಸಂಘಟನಾ ಕಾರ್ಯದರ್ಶಿ:** ಶ್ರೀ ಪ್ರಭು ಚನ್ನಬಸವ ಮಹಾಸ್ವಾಮಿಗಳು, ಅಥಣಿ

**ಒಕ್ಕೂಟದ ವಕ್ತಾರರು:** ಶ್ರೀ ನಿಜಗುಣ ಪ್ರಭು ತೋಂಟದಾರ್ಯ ಮಹಾಸ್ವಾಮಿಗಳು, ಮುಂಡರಗಿ

**ಸದಸ್ಯರು:** ಶ್ರೀ ಜಗದ್ಗುರು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು–ಗದಗ, ಶ್ರೀ ಜಗದ್ಗುರು ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿಗಳು–ನಿಡಸೋಸಿ, ಶ್ರೀ ಜಗದ್ಗುರು ಡಾ. ಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳು–ಕಲಬುರ್ಗಿ, ಶ್ರೀ ಗುರುಮಹಾಂತ ಮಹಾಸ್ವಾಮಿಗಳು–ಇಳಕಲ್, ಶ್ರೀ ಪ್ರಭು ಮಹಾಸ್ವಾಮಿಗಳು–ಸೊಂಡೂರು, ಶ್ರೀ ಕೋರಣೇಶ್ವರ ಮಹಾಸ್ವಾಮಿಗಳು–ಘತ್ತರಗಾಂವ, ಶ್ರೀ ಶರಚ್ಚಂದ್ರ ಮಹಾಸ್ವಾಮಿಗಳು–ಮೈಸೂರು, ಶ್ರೀ ಚಂದ್ರಶೇಖರ ಮಹಾಸ್ವಾಮಿಗಳು–ಬೆಟ್ಟದಹಳ್ಳಿ, ಶ್ರೀ ಶಿವಾನಂದ ಮಹಾಸ್ವಾಮಿಗಳು–ಹುಣಸೂರು.

**ಸಲಹಾ ಮಂಡಳಿ:** ಶ್ರೀ ಮಾತೆ ಗಂಗಾದೇವಿಯವರು–ಕೂಡಲಸಂಗಮ, ಶ್ರೀ ಗೊ ರು ಚನ್ನಬಸಪ್ಪ–ಬೆಂಗಳೂರು, ಶ್ರೀ ಎಸ್ ಎಂ ಜಾಮದಾರ್–ಬೆಂಗಳೂರು, ಶ್ರೀ ಶಂಕರ ಬಿದರಿ–ಬೆಂಗಳೂರು, ಡಾ. ಸಿ ಸೋಮಶೇಖರ–ಬೆಂಗಳೂರು, ಶ್ರೀ ಬಸವರಾಜ ರೊಟ್ಟಿ–ಬೆಳಗಾಂ, ಶ್ರೀ ಬಸವರಾಜ ಧನ್ನೂರು–ಬೀದರ್, ಶ್ರೀ ಮಹಾದೇವಪ್ಪ–ಮೈಸೂರು, ಶ್ರೀ ಜಿ ಬಿ ಪಾಟೀಲ್–ಬೆಂಗಳೂರು, ಶ್ರೀ ಎಂ ವಿ ಗೊಂಗಡಶೆಟ್ಟಿ–ಹುಬ್ಬಳ್ಳಿ.

## 'ಬಸವ ಸಂಸ್ಕೃತಿ ಅಭಿಯಾನದ' ಜಿಲ್ಲಾ ಸಮಿತಿ ಜವಾಬ್ದಾರಿ:

ಪ್ರತಿಯೊಂದು ಜಿಲ್ಲೆಯಲ್ಲೂ 'ಬಸವ ಸಂಸ್ಕೃತಿ ಅಭಿಯಾನ' ಸಮಿತಿಯನ್ನು ಸ್ಥಳೀಯರೇ ನೇಮಕ ಮಾಡಿಕೊಳ್ಳಬೇಕು. ಸಮಿತಿಯಲ್ಲಿ ಜಾತ್ಯತೀತವಾಗಿ ಸ್ವಾಮಿಗಳು, ಉತ್ಸಾಹಿ ಯುವಕ–ಯುವತಿಯರು, ಹಿರಿಯರನ್ನು ಒಳಗೊಂಡಂತೆ 15 ಜನರು ಇರಬೇಕು. ಅವರಲ್ಲೇ ಅಧ್ಯಕ್ಷರು, ಉಪಾಧ್ಯಕ್ಷರು, ಕೋಶಾಧ್ಯಕ್ಷರು, ಕಾರ್ಯದರ್ಶಿ ಎಂದು ನೇಮಕ ಮಾಡಿಕೊಳ್ಳಬಹುದು. ಈ ಸಮಿತಿಯವರು ತಮ್ಮ ಕಾರ್ಯಕ್ರಮದ ಖರ್ಚಿಗೆ ಬೇಕಾದ ಆರ್ಥಿಕ ನೆರವನ್ನು ಸಾರ್ವಜನಿಕರಿಂದ ಸಂಗ್ರಹ ಮಾಡಿ ಜಮಾ–ಖರ್ಚು ಪಾರದರ್ಶಕವಾಗಿ ಇಡಬೇಕು.

- ಬಯಲಿನಲ್ಲಿ ಅಥವಾ ಸಾವಿರಾರು ಜನ ಕೂರಬಹುದಾದ ಎಕೊ ಇಲ್ಲದ (ಪ್ರತಿಧ್ವನಿ) ಸಭಾಭವನದಲ್ಲಿ ಕಾರ್ಯಕ್ರಮದ ವ್ಯವಸ್ಥೆ ಮಾಡುವುದು.
- ಕಾರ್ಯಕ್ರಮದ ದಿನ ಬೆಳಗ್ಗೆ 10–30 ಕ್ಕೆ ತಮ್ಮಲ್ಲಿಗೆ ದಯಮಾಡಿಸುವ ಮಠಾಧೀಶರನ್ನು ಸ್ವಾಗತ ಮಾಡಿಕೊಳ್ಳುವುದು.
- ಕಾರ್ಯಕ್ರಮಕ್ಕೆ ಬಂದ ಉಪನ್ಯಾಸಕರಿಗೆ ಪ್ರವಾಸಭತ್ಯೆ, ಪ್ರಸಾದ, ವಸತಿಯ ವ್ಯವಸ್ಥೆಯೂ ಆಗಬೇಕು.
- ವಚನ ಸಂಗೀತ ಮತ್ತು ನಾಟಕ ಕಲಾವಿದರಿಗೆ 50 ಸಾವಿರ ಗೌರವ ಧನ ಕೊಡಬೇಕು.
- ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲ ಜನರಿಗೆ ರಾತ್ರಿ ಪ್ರಸಾದದ ವ್ಯವಸ್ಥೆ ಮಾಡಬೇಕು.
- ಕಲಾವಿದರು, ಸಂಗೀತಗಾರರು ಮತ್ತು ಸ್ವಾಮಿಗಳಿಗೆ ಅಂದು ರಾತ್ರಿ ತಂಗಲು ವ್ಯವಸ್ಥೆ ಮಾಡಬೇಕು. ಕಲಾವಿದರು ಮತ್ತಿತರ ತಂತ್ರಜ್ಞರು ಸೇರಿ ಕನಿಷ್ಠ 40 ಜನರು ಆಗಬಹುದು.
- ಕಲಾವಿದರಿಗೆ ಬೆಳಗ್ಗೆ ಶೌಚಾಲಯ, ಸ್ನಾನ ಮತ್ತು ಬೆಳಗಿನ ತಿಂಡಿಯ ವ್ಯವಸ್ಥೆಯಾಗಬೇಕು.

## ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಜವಾಬ್ದಾರಿ:

ಎಲ್ಲ ಜಿಲ್ಲೆಗಳ ಜಿಲ್ಲಾ ಸಮಿತಿಯವರ ಜೊತೆ ಸಂಪರ್ಕ ಇಟ್ಟುಕೊಂಡು ಅವರು ಕೇಳುವ ಮಾಹಿತಿ ಒದಗಿಸುವುದು, ಸಲಹೆ, ಸೂಚನೆಗಳನ್ನು ನೀಡುವುದು. ಅಭಿಯಾನದಲ್ಲಿ ಪೂರ್ಣಾವಧಿ ಭಾಲ್ಕಿಯ ಶ್ರೀ ಬಸವಲಿಂಗ ಪಟ್ಟದೇವರು, ಗದಗಿನ ಶ್ರೀ ಜಗದ್ಗುರು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ಉಪಸ್ಥಿತರಿದ್ದು ಕಾರ್ಯಕ್ರಮದ ಪೂರ್ಣ ಜವಾಬ್ದಾರಿಯನ್ನು ನಿರ್ವಹಿಸುವರು. ಅವರ ಜೊತೆ ಇನ್ನೂ ಬೇರೆ ಬೇರೆ ಸ್ವಾಮೀಜಿಯವರು ಸಹ ಉಪಸ್ಥಿತರಿರುತ್ತಾರೆ.

# ಬಸವ ಸಂಸ್ಕೃತಿ ಅಭಿಯಾನ 2025

## 2025 ಸೆಪ್ಟೆಂಬರ್ 1 ರಿಂದ ಅಕ್ಟೋಬರ್ 1 ರವರೆಗೆ ನಡೆಯುವ 'ಬಸವ ಸಂಸ್ಕೃತಿ ಅಭಿಯಾನ'

ಮಾರ್ಗ ಸೂಚಿ



| ದಿನಾಂಕ | ಜಿಲ್ಲೆ | ದಿನಾಂಕ | ಜಿಲ್ಲೆ |
|---|---|---|---|
| ಸೆಪ್ಟೆಂಬರ್ 1 ಸೋಮವಾರ | ಬಸವನಬಾಗೇವಾಡಿ ಉದ್ಘಾಟನೆ | ಸೆಪ್ಟೆಂಬರ್ 17 ಬುಧವಾರ | ಶಿವಮೊಗ್ಗ |
| ಸೆಪ್ಟೆಂಬರ್ 2 ಮಂಗಳವಾರ | ಕಲಬುರಗಿ | ಸೆಪ್ಟೆಂಬರ್ 18 ಗುರುವಾರ | ಉಡುಪಿ |
| ಸೆಪ್ಟೆಂಬರ್ 3 ಬುಧವಾರ | ಬೀದರ್ | ಸೆಪ್ಟೆಂಬರ್ 19 ಶುಕ್ರವಾರ | ಮಂಗಳೂರು |
| ಸೆಪ್ಟೆಂಬರ್ 4 ಗುರುವಾರ | ಯಾದಗಿರಿ | ಸೆಪ್ಟೆಂಬರ್ 20 ಶನಿವಾರ | ಚಿಕ್ಕಮಗಳೂರು |
| ಸೆಪ್ಟೆಂಬರ್ 5 ಶುಕ್ರವಾರ | ರಾಯಚೂರು | ಸೆಪ್ಟೆಂಬರ್ 21 ರವಿವಾರ | ಹಾಸನ |
| ಸೆಪ್ಟೆಂಬರ್ 6 ಶನಿವಾರ | ಬಳ್ಳಾರಿ | ಸೆಪ್ಟೆಂಬರ್ 22 ಸೋಮವಾರ | ಕೊಡಗು |
| ಸೆಪ್ಟೆಂಬರ್ 7 ರವಿವಾರ | ವಿಜಯನಗರ | ಸೆಪ್ಟೆಂಬರ್ 23 ಮಂಗಳವಾರ | ಮೈಸೂರು |
| ಸೆಪ್ಟೆಂಬರ್ 8 ಸೋಮವಾರ | ಕೊಪ್ಪಳ | ಸೆಪ್ಟೆಂಬರ್ 24 ಬುಧವಾರ | ಚಾಮರಾಜನಗರ |
| ಸೆಪ್ಟೆಂಬರ್ 9 ಮಂಗಳವಾರ | ಗದಗ | ಸೆಪ್ಟೆಂಬರ್ 25 ಗುರುವಾರ | ಮಂಡ್ಯ |
| ಸೆಪ್ಟೆಂಬರ್ 10 ಬುಧವಾರ | ಬಾಗಲಕೋಟೆ | ಸೆಪ್ಟೆಂಬರ್ 26 ಶುಕ್ರವಾರ | ರಾಮನಗರ |
| ಸೆಪ್ಟೆಂಬರ್ 11 ಗುರುವಾರ | ಬೆಳಗಾವಿ | ಸೆಪ್ಟೆಂಬರ್ 27 ಶನಿವಾರ | ತುಮಕೂರು |
| ಸೆಪ್ಟೆಂಬರ್ 12 ಶುಕ್ರವಾರ | ಧಾರವಾಡ | ಸೆಪ್ಟೆಂಬರ್ 28 ರವಿವಾರ | ಚಿಕ್ಕಬಳ್ಳಾಪುರ |
| ಸೆಪ್ಟೆಂಬರ್ 13 ಶನಿವಾರ | ಕಾರವಾರ | ಸೆಪ್ಟೆಂಬರ್ 29 ಸೋಮವಾರ | ಕೋಲಾರ |
| ಸೆಪ್ಟೆಂಬರ್ 14 ರವಿವಾರ | ಹಾವೇರಿ | ಸೆಪ್ಟೆಂಬರ್ 30 ಮಂಗಳವಾರ | ಬೆಂಗಳೂರು ಗ್ರಾಮಾಂತರ |
| ಸೆಪ್ಟೆಂಬರ್ 15 ಸೋಮವಾರ | ದಾವಣಗೆರೆ | ಅಕ್ಟೋಬರ್ 1 ಬುಧವಾರ | ಬೆಂಗಳೂರು ನಗರ ಸಮಾರೋಪ |
| ಸೆಪ್ಟೆಂಬರ್ 16 ಮಂಗಳವಾರ | ಚಿತ್ರದುರ್ಗ | | |

**ಅಭಿಯಾನದ ಆಶಯಗಳು:**

- ಸಮಸಮಾಜದ ನಿರ್ಮಾಣ
- ವ್ಯಸನಮುಕ್ತ ಸಮಾಜದ ನಿರ್ಮಾಣ
- ಅಂಧಶ್ರದ್ಧೆ ಅಳಿಸಿ ಸುಜ್ಞಾನ ಬೆಳೆಸುವುದು
- ಸಧೃಡ ಸಮಾಜ ಕಟ್ಟುವುದು
- ಮಕ್ಕಳಲ್ಲಿ ಅಧ್ಯಾತ್ಮದ ಅರಿವು ಮೂಡಿಸುವದು
- ಮಹಿಳೆಯರ ಘನತೆಯನ್ನು ಕಾಪಾಡುವುದು
- ವ್ಯಕ್ತಿತ್ವ ವಿಕಸನ ಇತ್ಯಾದಿ.

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯಿವೆ,
ನೋಡಯ್ಯಾ ಮಹಾದಾನಿ ಕೂಡಲಸಂಗಮದೇವಾ, ಮಾದಾರ
ಚೆನ್ನಯ್ಯನ ಮನೆಯ ಮಗ ನಾನಯ್ಯಾ

'ಬಸವ ಸಂಸ್ಕೃತಿ ಅಭಿಯಾನ' ಬಸವಾದಿ ಶಿವಶರಣರ ತತ್ವಾದರ್ಶಗಳನ್ನು ಜನಮನದಲ್ಲಿ ಬಿತ್ತುವ ಸದಾಶಯ ಹೊಂದಿದೆ. ಕಟ್ಟಡಗಳನ್ನು ಕಟ್ಟುವುದಕ್ಕಿಂತ ಜನರ ಮನಸ್ಸುಗಳನ್ನು ಕಟ್ಟುವ, ಪರಸ್ಪರ ಬಾಂಧವ್ಯದ ಬೆಸುಗೆ ಹಾಕುವ ಕಾರ್ಯ ತುಂಬಾ ಕಷ್ಟಕರವಾದುದು. ವೈಚಾರಿಕತೆ, ವೈಜ್ಞಾನಿಕತೆಯ ಉತ್ತುಂಗದಲ್ಲಿ ಮೆರೆಯುತ್ತಿರುವ ಮಾನವರಿಗೆ ಆದರ್ಶಗಳು ಬೇಕಾಗಿಲ್ಲ. 'ಹೊತ್ತು ಬಂದಂತೆ ಕೊಡೆ ಹಿಡಿಯುವ ಬುದ್ಧಿವಂತರು ಹೆಚ್ಚುತ್ತಿದ್ದಾರೆ. ನಾಗರಿಕ ಸೌಲಭ್ಯಗಳ ಮಾಯಾಜಾಲಕ್ಕೆ ಸಿಲುಕಿ ಸಂಸ್ಕೃತಿಯ ಬೇರುಗಳನ್ನೇ ನಾಶಗೊಳಿಸಿಕೊಳ್ಳುತ್ತಿದ್ದೇವೆ ಎನ್ನುವ ಅರಿವು ಬುದ್ಧಿವಂತರಿಗಿಲ್ಲ. 'ವಿನಾಶಕಾಲೇ ವಿಪರೀತ ಬುದ್ಧಿ' ಎನ್ನುವ ಸ್ಥಿತಿ ಅವರದಾಗಿದೆ. ಅಂಥವರಲ್ಲೂ ಬಸವ ಬೆಳಕಿನ ಕಿರಣಗಳ ಪ್ರವೇಶಕ್ಕೆ ಪ್ರಯತ್ನಿಸಬೇಕಿದೆ.


**ಸಂಪರ್ಕ:**

ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು
ಹಿರೇಮಠ ಸಂಸ್ಥಾನ, ಭಾಲ್ಕಿ
Mob: 94481 15404

ಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ
ಡಂಬಳ-ಗದಗ, Mob: 94495 57522

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು
ಶ್ರೀ ತರಳಬಾಳು ಜಗದ್ಗುರು ಶಾಖಾಮಠ-ಸಾಣೇಹಳ್ಳಿ
Mob: 94480 57748